ಕೂರಲಿದ್ದರು. ಅಂತೂ ಹೇಗೋ ಈ ಎರಡು ಸೈಕಲ್‌ಗಳ ಮೇಲೆ ತಮ್ಮೆಲ್ಲ ಪರಿಕರಗಳನ್ನು ಹೇರಿಕೊಂಡು ಯಾತ್ರೆಗೆ ಸಿದ್ಧರಾದರು.

ಪ್ರಕಾಶ್ ಜಸನೀಜೀ ಕ್ರೀಡಾಪ್ರೇಮಿ. ಆತ ಇವರುಗಳ ಸೈಕಲ್‌ಗೆ ಅನೇಕ ಕಡೆ ರೇಡಿಯಂ ಸ್ಟಿಕರ್ ಅಂಟಿಸಿದರು. ಕತ್ತಲೆಯ ಹಾದಿಯ ಪಯಣದಲ್ಲಿ ಸುರಕ್ಷತೆಯ ದೃಷ್ಟಿಯಿಂದ ಇದು ತುಂಬಾ ಸಹಾಯಕವಾಗಲಿತ್ತು. ಇದರ ನಡುವೆ ಇವರುಗಳ ದಿನವೂ ಸೈಕಲ್ ತುಳಿಯುವ ಅಭ್ಯಾಸ ಮುಂದುವರೆದಿತ್ತು. ವಾರದಲ್ಲಿ ಎರಡು ಬಾರಿ ಗೋಂದಿಯಾದಿಂದ ಸುಮಾರು 50 ಕಿಲೋಮೀಟರ್ ದೂರದಲ್ಲಿ ಇದ್ದ ನಾಗಜಿರಾ ಅಭಯಾರಣ್ಯಕ್ಕೆ ಹೋಗಿ ಬರುತ್ತಿದ್ದರು. ಅದಲ್ಲದೆ ಆರು ಬಾರಿ ಕಾನ್ಹಾ ಕಿಸ್ಲಿ ನ್ಯಾಷನಲ್ ಪಾರ್ಕ್‌ಗೆ ಹೋಗಿ ಬಂದರು. ಇದು ಗೋಂದಿಯಾದಿಂದ ಸುಮಾರು 180 ಕಿಲೋಮೀಟರ್ ದೂರದಲ್ಲಿತ್ತು! 180 ಕಿಲೋಮೀಟರ್ ಹೋಗುವುದು ಮತ್ತು ಅಷ್ಟೇ ದೂರವನ್ನು ಕ್ರಮಿಸಿ ಹಿಂತಿರುಗುವುದು. ಎಲ್ಲವೂ ಸರಿಯಾಗಿ ಜರುಗುತ್ತಿದ್ದ ಕಾರಣ ತಂಡಕ್ಕೆ ತಮ್ಮ ಯಾತ್ರೆಯ ಬಗ್ಗೆ ಆತ್ಮವಿಶ್ವಾಸ ಹೆಚ್ಚಿತು.

ದಿನಾಂಕ 15 ಅಕ್ಟೋಬರ್ ಹತ್ತಿರವಾಗುತ್ತಿತ್ತು. ತಯಾರಿ ಕೂಡ ಜೋರಿನಿಂದ ನಡೆಯುತ್ತಿತ್ತು. ಸೈಕಲ್ ಯಾತ್ರೆಯ ಆರಂಭದ ಎರಡು ದಿನಕ್ಕೆ ಮೊದಲು ಒಂದು ಪ್ರೆಸ್ ಕಾನ್ಫರೆನ್ಸ್ ಕರೆದರು. ಮೊದಲ ಬಾರಿಗೆ ಭಾವೇಶ್ ಮತ್ತು ಅವರ ಗೆಳೆಯರು ಹೀಗೊಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಲು ಹೊರಟಿದ್ದರು. ಮಾಧ್ಯಮದ ಬಹಳಷ್ಟು ಜನರು ಅಲ್ಲಿ ಆಗಮಿಸಿದ್ದರು. ಅವರೆಲ್ಲರಲ್ಲಿ ಕುತೂಹಲದ ನೂರು ಪ್ರಶ್ನೆಗಳಿದ್ದವು. ಯಾವ ಮಾರ್ಗದಿಂದ ಹೋಗುತ್ತಿರುವಿರಿ? ಓರ್ವ ಕುರುಡ ವ್ಯಕ್ತಿ ಈ ಪ್ರವಾಸವನ್ನು ಹೇಗೆ ಮಾಡಬಲ್ಲ? ಈ ಧಾಟಿಯ ಪ್ರಶ್ನೆಗಳು. ಅವರಿಗೆ ಏನನ್ನೂ ನೋಡಲಾರದ ಈತ ಈ ಪ್ರವಾಸ ಹೇಗೆ ಮಾಡುವನು? ಅದರಿಂದ ಆತನಿಗೇನು ಲಾಭ? ಎಂಬ ಭಾವನೆ. ಪ್ರತಿಯೊಬ್ಬ ಪತ್ರಕರ್ತನೂ ಭಾವೇಶ್ ಅವರಿಗೆ, ಈ ಯಾತ್ರೆಯಲ್ಲಿ ಹೋಗುವ ನಿನ್ನ ಉದ್ದೇಶವಾದರೂ ಏನು? ಎಂದು ಕೇಳುವರು. ಭಾವೇಶ್ ಆತ್ಮವಿಶ್ವಾಸದಿಂದ ಹೇಳಿದರು – 'ನನ್ನಂತಹ ಯುವಕರಿಗೆ ಒಂದು ಸಂದೇಶ ನೀಡಲು ಇಚ್ಛಿಸುತ್ತೇನೆ. ಒಮ್ಮೆ ನಾವು ಮನಸ್ಸು ಮಾಡಿದರೆ, ಯಾವುದೂ ಅಸಾಧ್ಯವಲ್ಲ'.

ಇಡೀ ಯಾತ್ರೆಯ ಮುಖ್ಯ ಆಕರ್ಷಣೆ ಭಾವೇಶ್ ಆದಂತಿತ್ತು. ಅವರು ಎಲ್ಲರ ಕೌತುಕದ ಕೇಂದ್ರವಾಗಿದ್ದರು. ಇಲ್ಲಿಯವರೆಗೂ ಹಣ ಸಂಗ್ರಹಿಸುವಾಗಲೂ ಭಾವೇಶ್ ಅವರೇ ಮುಂದಿದ್ದರು. ತಮ್ಮ ಪಯಣದ ಬಗ್ಗೆ ಉತ್ಸಾಹದಿಂದ ವಿವರಿಸುತ್ತಿದ್ದರು. ಈಗಲೂ ಸಮಾಧಾನವಾಗಿ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸಿದರು.

* * *

ಯೋಜಿಸಿದ ಆ ದಿನ ಬಂದೇ ಬಿಟ್ಟಿತು. ದಿನಾಂಕ 15 ಅಕ್ಟೋಬರ್ 1988. ಬೆಳಗ್ಗೆ ಆರೂವರೆ ಗಂಟೆಗೆ ಎಲ್ಲ ತಯಾರಿಯ ಜೊತೆಯಲ್ಲಿ ಮೂವರು ಗೆಳೆಯರು ನಟವರ್‌ಲಾಲ್ ಮಾಣಿಕ್‌ಲಾಲ್ ದಯಾಲ್ (ಎನ್.ಎಮ್.ಡಿ.) ಕಾಲೇಜಿನ ಆವರಣವನ್ನು ತಲುಪಿದರು. ಆ ದಿನ ಬೆಳಗ್ಗೆ ಏಳು ಗಂಟೆಗೆ ಪ್ರಫುಲ್ಲ ಪಟೇಲ್ ಅವರು ಆಗಮಿಸಿ ಹಸಿರು ಬಾವುಟ ಬೀಸಿ, ಅವರ ಸೈಕಲ್ ಯಾತ್ರೆಯನ್ನು ಉದ್ಘಾಟಿಸಲಿದ್ದರು. ಭಾವೇಶ್ ಅಷ್ಟು ಬೆಳಗ್ಗೆ ಹೆಚ್ಚು ಜನ ಬರಲಾರರು ಅಂದುಕೊಂಡು ಕಾಲೇಜಿನ ಆವರಣಕ್ಕೆ ಬಂದು ನಿಂತಾಗ, ಅದಾಗಲೇ ಇಡೀ ಪ್ರಾಂಗಣ ತುಂಬಿ ತುಳುಕಿದ್ದು ತಿಳಿದುಬಂತು. ಅವರ ಸ್ನೇಹಿತರೆಲ್ಲ ಹೂವಿನ ಹಾರದೊಡನೆ ಬಂದಿಳಿದಿದ್ದರು. ಪ್ರಫುಲ್ಲ ಪಟೇಲರೂ ಅದಾಗಲೇ ಬಂದಾಗಿತ್ತು. ಕಾಲೇಜಿನ ಪ್ರಾಂಶುಪಾಲರು, ಪ್ರಾಧ್ಯಾಪಕರು, ಲಯನ್ಸ್ ಕ್ಲಬ್‌ನ ಸದಸ್ಯರು ಎಲ್ಲರೂ ಅಲ್ಲಿ ಉಪಸ್ಥಿತರಿದ್ದರು. ಮಯೂರ್ ಭಾಟಿಯಾ ಪರಿವಾರವೂ ಅಲ್ಲಿತ್ತು.


ಭಾವೇಶ್ ಅವರ ತಂದೆ ಚಂದೂಬಾಯಿ ಭಾಟಿಯಾ ಮತ್ತು ತಾಯಿ ಹಸುಮತಿ ಬೆನ್

ಮೊದಲಿಗೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಮತ್ತಿತರ ಗಣ್ಯರು ಭಾಷಣ ಮಾಡಿ ಅವರನ್ನು ಪ್ರೋತ್ಸಾಹಿಸಿದರು. ಭಾವೇಶ್ ಅವರಿಗೂ ಎರಡು ಮಾತು ಆಡಲು ಹೇಳಿದರು. ಇಷ್ಟು ದೊಡ್ಡ ಜನ ಸಮೂಹದ ಎದುರು ಅವರೆಂದೂ ಮಾತಾಡಿರಲಿಲ್ಲ. ಅವರು ಮಾತನಾಡುತ್ತಿದ್ದಂತೆ, ಅವರ ಕೈ ಕಾಲುಗಳು ನಡುಗುತ್ತಿದ್ದವು. ಇದೆಲ್ಲ ಮುಗಿದ ಮೇಲೆ ಪ್ರಫುಲ್ಲ ಪಟೇಲ್ ಅವರು ಅಧ್ಯಕ್ಷ ಭಾಷಣ ಮಾಡಿ ಹಸಿರು ಬಾವುಟ ತೋರಿಸಿದರು.

ಗೆಳೆಯರ ಹಾರದ ಹೊರೆ ಕೊರಳಿನಲ್ಲಿ. ಸೈಕಲ್ ಹ್ಯಾಂಡಲ್‌ನಲ್ಲಿಯೂ ಹಾರಗಳು ನೇತಾಡುತ್ತಿವೆ. ಯಾರೋ ಕೈ ಕುಲುಕುತ್ತಿದ್ದಾರೆ, ಮತ್ಯಾರೋ ಅಪ್ಪಿ ಶುಭ ಕೋರುತ್ತಿದ್ದಾರೆ. ಇನ್ಯಾರೋ ಸೈಕಲ್ಲಿನ ಗಂಟೆ ಬಾರಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಭಾವೇಶ್ ಅವರಿಗೆ ಬದುಕಿನಲ್ಲಿ ಮರೆಯಲಾರದ ಕ್ಷಣ ಅದು. ನೆರೆದ ಇಷ್ಟೆಲ್ಲ ಜನರ ನಡುವೆ, ಕಾಲೇಜಿನ ಗೇಟಿನವರೆಗೂ ತಲುಪಿದರು. ಭಾವೇಶ್‌ಗೆ ತಾವೆಲ್ಲೋ ಅಂತರಿಕ್ಷಯಾನಕ್ಕೇ ಹೊರಟುಬಿಟ್ಟಂತೆ ಅನಿಸಿತ್ತು. ಅಲ್ಲಿದ್ದ ಜನರ ಉತ್ಸಾಹ ತಾರಕ ಮುಟ್ಟಿತ್ತು. ಕಾಲೇಜಿನ ಗೇಟಿನ ಹೊರಗೆ ಮೂವರು ಗೆಳೆಯರು ಸೈಕಲ್ ಏರಿ, ಕಿವಿಗಡಚಿಕ್ಕುವ ಚಪ್ಪಾಳೆಯ ಸದ್ದಿನೊಡನೆ ಅವರೆಲ್ಲರಿಂದ ಬೀಳ್ಕೊಂಡರು.

ಕಾಲೇಜಿನ ಗೇಟಿನಿಂದ ಸುಮಾರು ಐದು ಕಿ.ಮೀ. ದೂರದಲ್ಲಿ ಕಾರಂಜಿ ಚೌಕವಿದೆ. ಅದನ್ನು 'ಫುಲ್ಚುರ್ ನಾಕಾ' ಎಂದು ಕರೆಯುತ್ತಾರೆ. ಅಲ್ಲಿಯವರೆಗೂ ಸುಮಾರು ನಾನ್ನೂರು ಐನೂರು ಗೆಳೆಯರು ತಮ್ಮ ವಾಹನಗಳಲ್ಲಿ ಜೊತೆಗೆ ಬಂದು ವಿದಾಯ ಹೇಳಿದರು. ಇಷ್ಟೆಲ್ಲ ಸಂಭ್ರಮದಿಂದ ಮಹತ್ವಾಕಾಂಕ್ಷೆಯಿಂದ ಅವರ ಸೈಕಲ್ ಯಾತ್ರೆ ಆರಂಭವಾಗಿತ್ತು. ಅಷ್ಟೆಲ್ಲ ಜನರ ಶುಭ ಹಾರೈಕೆಯನ್ನು ಹೊತ್ತು ಹೊರಟಿತ್ತು. ಈಗ ಅವರೆದುರು ಹರಡಿ ನಿಂತಿತ್ತು ಸಾವಿರ ಸಾವಿರ ಕಿಲೋಮೀಟರ್‌ಗಳ ದೀರ್ಘ ಹಾದಿ.

ಇದೀಗ ದಿಟವಾಗಿ ಆರಂಭವಾಗಿತ್ತು ಸೈಕಲ್ ಯಾತ್ರೆಯ ಮೊದಲ ಪಾದ. ಇಲ್ಲಿಂದ ಸುಮಾರು 45 ಕಿ.ಮೀ. ದೂರದಲ್ಲಿ 6ನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿ ಇತ್ತು. ಅಲ್ಲಿಂದ ಸೀದಾ ನಾಗಪುರಕ್ಕೆ ಹೋಗಬಹುದಿತ್ತು. ಗೆಳೆಯರೆಲ್ಲ ಹಿಂತಿರುಗಿದಾಗ, ಫುಲ್ಚುರ್ ನಾಕಾದಿಂದ ಒಂದಿಷ್ಟು ಮುಂದೆ ಹಾದು, ಅಲ್ಲಿ ಕಂಡ ಒಂದು ಚಾಯ್ ಅಂಗಡಿಯತ್ತ ಇಳಿದರು. ತಮಗೆ ಹಾಕಿದ್ದ ಹಾರಗಳನ್ನೆಲ್ಲ ತೆಗೆದು ಅಂಗಡಿಯಾತನಿಗೆ ಕೊಟ್ಟರು. ಆ ಹೊರೆ ಹೊತ್ತು ಸೈಕಲ್ ತುಳಿಯುವುದು ಸಾಧ್ಯವೆ? ಸೈಕಲ್ ಮೇಲೆ ಎಷ್ಟು ಸಾಧ್ಯವೋ ಅಷ್ಟು ಭಾರ ಕಡಿಮೆ ಮಾಡಿಕೊಳ್ಳುವ ಅಗತ್ಯವಿತ್ತು. ಆ ಚಹಾದ ಅಂಗಡಿಯವ ಬಹಳ ಖುಷಿಯಿಂದ, ಮೂವರು ಗೆಳೆಯರಿಗೂ ಪುಕ್ಕಟೆ ಚಹಾ ಕುಡಿಸಿ, ತಿಂಡಿ ತಿನ್ನಿಸಿ, ಹಾದಿಗೆಂದು ಕೆಲವು ಬಿಸ್ಕೆಟಿನ ಪೊಟ್ಟಣಗಳನ್ನೂ ಕೊಟ್ಟು ಕಳುಹಿಸಿದ.

ಬೆಳಗು ಏರುತ್ತಿದ್ದಂತೆ ಬಿಸಿಲ ಧಗೆಯಿಂದ ಬೆವರು ಕಿತ್ತು ಜಲಪಾತದಂತೆ ಹರಿಯುತ್ತಿದೆ! ನಿಜಕ್ಕೂ ತಾವು ಕೈಗೊಂಡ ಪಯಣ ತಾವು ಕಲ್ಪಿಸಿದಷ್ಟು ಸುಲಭದ್ದಲ್ಲ ಎಂದು ಮೂವರಿಗೂ ಮೆಲ್ಲನೆ